ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಡೀನರು/22/2022-23 ದಿನಾಂಕ: 18.10.2022.

**ಅಧಿಸೂಚನೆ**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕಲಾ, ನಿಕಾಯದ ಡೀನರ ನೇಮಕಾತಿಯ ಬಗ್ಗೆ

ಉಲ್ಲೇಖ:
1. ಈ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಬಿಸಿಯು/ಡೀನರು/ 659/2018-19 ದಿನಾಂಕ 01.03.2019
2. ಈ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಬಿಸಿಯು/ಡೀನರು/ 240/2020-21 ದಿನಾಂಕ 11.02.2021
3. ಈ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಬಿಸಿಯು/ಸಿಬ್ಬಂದಿ /ಸಿಎಎಸ್/613/2022-23 ದಿನಾಂಕ: 18.06.2022
4. ಡಾ. ಎನ್ ನರಸಿಂಹಮೂರ್ತಿ ಅಧ್ಯಕ್ಷರು ಪತ್ರಿಕೋದ್ಯಮ ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ: 30.10.2021
5. ಈ ಕಛೇರಿ ಜ್ಞಾಪನ ಪತ್ರ ಸಂಖ್ಯೆ: ಬಿಸಿಯು/ಬಿ.ಒ.ಎಸ್/ ಸಮೂಹ & ಪತ್ರಿಕೋದ್ಯಮ/ 2021-22/ 297/ ದಿನಾಂಕ: 13.12.2021
6. ಡಾ. ಎನ್ ನರಸಿಂಹಮೂರ್ತಿ ಪತ್ರ ದಿನಾಂಕ: 16.12.2021
7. ಕಾರಣ ಕೇಳಿ ನೋಟೀಸ್ ಸಂಖ್ಯೆ: ಬೆಂ.ನ.ವಿ/ ಸಿಬ್ಬಂದಿ 1 &2/ 693/ 2022-23 ದಿನಾಂಕ : 06.07.2022
8. ಕುಲಪತಿಗಳ ಆದೇಶ ದಿನಾಂಕ: 18.10.2022

***

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 21(1) ಅಡಿಯಲ್ಲಿ ಆಯಾಯ ನಿಕಾಯದ ಪ್ರಾಧ್ಯಾಪಕರನ್ನು ಜೇಷ್ಠತೆ ಮತ್ತು ಸರದಿಯ ಮೇಲೆ ಸಂಬಂಧಿಸಿದ ನಿಕಾಯದ ಡೀನರನ್ನಾಗಿ ನಾಮನಿರ್ದೇಶನ ಮಾಡಲು ಅವಕಾಶವಿರುತ್ತದೆ. ಅದರಂತೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ದಿನಾಂಕ 1.03.2019 ರಿಂದ 28.02.2021 ರ ಎರಡು ವರ್ಷಗಳ ಅವಧಿಗೆ ವಿಶ್ವವಿದ್ಯಾನಿಲಯದ ವಿವಿಧ ನಿಕಾಯಗಳ ಡೀನರನ್ನು ನಾಮನಿರ್ದೇಶನ ಮಾಡಲಾಗಿದೆ. ಉಲ್ಲೇಖ (2) ರ ಅಧಿಸೂಚನೆಯಲ್ಲಿ 01.03.2021 ರಿಂದ 28.02.2023 ವರೆಗಿನ ಎರಡನೇ ಅವಧಿಗೆ ಡೀನರನ್ನು ನೇಮಕ ಮಾಡುವ ಸಂದರ್ಭದಲ್ಲಿ, ಕಲಾ ನಿಕಾಯದಲ್ಲಿ ಪರ್ಯಾಯ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ, ಡಾ. ಎನ್ ನರಸಿಂಹಮೂರ್ತಿ, ಪ್ರಾಧ್ಯಾಪಕರು, ಸಂವಹನ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಅವರನ್ನು ಕಲಾ ನಿಕಾಯದ ಡೀನರಾಗಿ ಮುಂದುವರೆಸಲಾಗಿದೆ. ಉಲ್ಲೇಖ (3) ರಲ್ಲಿ ನಮೂದಿಸಿದ ಆದೇಶದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಗತಿಕ ಭಾಷೆಗಳ ವಿಭಾಗದಲ್ಲಿ ಸಹ ಪ್ರದ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಜ್ಯೋತಿ ವೆಂಕಟೇಶ್ ರವರನ್ನು ದಿನಾಂಕ 24.03.2021 ರಿಂದ ಪೂರ್ವಾನ್ವಯಗೊಳಿಸಿ ಪ್ರಾಧ್ಯಾಪಕರೆಂದು ನೇಮಕ ಮಾಡಿ ಆದೇಶಿಸಲಾಗಿರುತ್ತದೆ. ಡಾ. ಜ್ಯೋತಿ ವೆಂಕಟೇಶ್ ರವರು ತಮ್ಮನ್ನು ಕಲಾ ನಿಕಾಯದ ಡೀನರಾಗಿ ನಾಮನಿರ್ದೇಶನ ಮಾಡಬೇಕೆಂದು ದಿನಾಂಕ. 01.10.2022 ರ ಅರ್ಜಿಯಲ್ಲಿ ಕೋರಿರುತ್ತಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2021-22 ರಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಿದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯದ ಎಲ್ಲಾ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ, ನೂತನ ಪರಿನಿಯಮಗಳ ಪ್ರಕಾರ ಪಠ್ಯಕ್ರಮಗಳನ್ನು ಸಿದ್ಧಪಡಿಸಿ, ಅಧ್ಯಯನ ಮಂಡಳಿಗಳ ಅನುಮೋದನೆ ಪಡೆದು ಸಲ್ಲಿಸುವಂತೆ ಎಲ್ಲಾ ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ಕೋರಲಾಗಿತ್ತು. ಅದರಂತೆ ಅಧ್ಯಯನ

ಮಂಡಳಿಗಳ ಅಧ್ಯಕ್ಷರು ಸಲ್ಲಿಸಿದ ಪಠ್ಯಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಪಡೆದು ಜಾರಿಗೊಳಿಸಲಾಗಿದೆ. ಅದರೆ ಉಲ್ಲೇಖ (4) ರ ಪತ್ರದಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮಂಡಳಿಯ ಅಧ್ಯಕ್ಷರು, ಅಧ್ಯಯನ ಮಂಡಳಿ ಅನುಮೋದನೆ ಪಡೆಯದೆ ತಮ್ಮ ಹಂತದಲ್ಲಿ, ಬಿ.ಎ. ಪತ್ರಿಕೋದ್ಯಮ ವಿಷಯದ ಪಠ್ಯಕ್ರಮದ ಪ್ರತಿಯನ್ನು ಸಲ್ಲಿಸಿರುತ್ತಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಪಠ್ಯಕ್ರಮವನ್ನು ಮುಂಬರುವ ಅಧ್ಯಯನ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಜಾರಿಗೊಳಿಸಲಾಗಿದೆ. ಅಧ್ಯಯನ ಮಂಡಳಿಯ ಒಪ್ಪಿಗೆ ಪಡೆಯದೇ ನೇರವಾಗಿ ಬಿ.ಎ. ಪತ್ರಿಕೋದ್ಯಮ ವಿಷಯದ ಪಠ್ಯಕ್ರಮವನ್ನು ಸಲ್ಲಿಸಿರುವುದು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಸರಿಯಾದ ಕ್ರಮವಲ್ಲವೆಂಬ ವಿಷಯವನ್ನು ವಿವರಿಸಿ ಅಧ್ಯಯನ ಮಂಡಳಿ ಅಧ್ಯಕ್ಷರಾದ ಡಾ. ಎನ್. ನರಸಿಂಹಮೂರ್ತಿ ರವರಿಗೆ ಉಲ್ಲೇಖ (5) ರಲ್ಲಿ ನಮೂದಿಸಿದ ಜ್ಞಾಪನಾ ಪತ್ರ ನೀಡಲು, ಡಾ. ಎನ್ ನರಸಿಂಹಮೂರ್ತಿ ಪ್ರಾಧ್ಯಾಪಕರು, ಉಲ್ಲೇಖ (6) ರಲ್ಲಿ ನಮೂದಿಸಿದ ಪತ್ರದಲ್ಲಿ ಸಮರ್ಪಕ ಉತ್ತರ ನೀಡದೆ,ಸ್ನಾತಕ ಅಧ್ಯಯನ ಮಂಡಳಿ ಅಧ್ಯಕ್ಷರ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿರುತ್ತಾರೆ. ಈ ಕುರಿತು ಡಾ. ಎನ್ ನರಸಿಂಹಮೂರ್ತಿ ಪ್ರಾಧ್ಯಾಪಕರು, ಸಂವಹನ ವಿಭಾಗ, ಇವರಿಗೆ ನೀಡಲಾದ ಕಾರಣ ಕೇಳಿ ನೋಟೀಸಿಗೆ ಸಮರ್ಪಕವಾದ ಉತ್ತರ ನೀಡಿರುವುದಿಲ್ಲ ಹಾಗೂ 2022-23 ನೇ ಶೈಕ್ಷಣಿಕ ಸಾಲಿಗೆ ಅಗತ್ಯವಾದ ಮೂರು ಮತ್ತು ನಾಲ್ಕನೇ ಸೆಮೆಸ್ಟರ್ ಪಠ್ಯಕ್ರಮಗಳನ್ನು ಸಹ ಸಿದ್ಧಪಡಿಸಿ ಅಧ್ಯಯನ ಮಂಡಳಿ ಅನುಮೋದನೆ ಪಡೆದು ಸಲ್ಲಿಸಿರುವುದಿಲ್ಲ.

ಮೇಲೆ ತಿಳಿಸಿದ ಅಂಶಗಳ ಹಿನ್ನೆಲೆಯಲ್ಲಿ, ಡಾ. ಎನ್ ನರಸಿಂಹಮೂರ್ತಿ ಪ್ರಾಧ್ಯಾಪಕರು, ಸಂವಹನ ವಿಭಾಗ ಇವರನ್ನು ಕಲಾ ನಿಕಾಯದ ಡೀನರ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಡಾ. ಜ್ಯೋತಿ ವೆಂಕಟೇಶ್ ಪ್ರಾಧ್ಯಾಪಕರು, ಜಾಗತಿಕ ಭಾಷೆಗಳ ವಿಭಾಗ, ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 21(1)ರ ಅಡಿಯಲ್ಲಿ ಕಲಾ ನಿಕಾಯದ ಡೀನರಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

ಆದೇಶದ ಮೇರೆಗೆ,

ಕುಲಸಚಿರು

ಗೆ,

1. ಡಾ: ಎನ್. ನರಸಿಂಹಮೂರ್ತಿ, ಪ್ರಾಧ್ಯಾಪಕರು, ಸಂವಹನ ವಿಭಾಗ, ಬೆಂ.ನ.ವಿ.
2. ಡಾ. ಜ್ಯೋತಿ ವೆಂಕಟೇಶ್, ಪ್ರಾಧ್ಯಾಪಕರು, ಜಾಗತಿಕ ಭಾಷೆಗಳ ವಿಭಾಗ, ಬೆಂ.ನ.ವಿ.

ಪ್ರತಿಗಳು:

1. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಸಿಂಡಿಕೇಟ್ ಸದಸ್ಯರುಗಳು / ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ, ಬೆಂ.ನ.ವಿ.
3. ವಿತ್ತಾಧಿಕಾರಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ.
4. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು ಮತ್ತು ಸಂಯೋಜಕರುಗಳಿಗೆ.
5. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
4. ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ), ರವರ ಆಪ್ತ ಕಾರ್ಯದರ್ಶಿಗಳಿಗೆ, ಬೆಂ.ನ.ವಿ.
6. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ **www/bcu.ac.in** ರಲ್ಲಿ ಪ್ರಕಟಿಸಲು
7. ರಕ್ಷಣಾ ಕಡತ / ಹೆಚ್ಚುವರಿ ಪ್ರತಿ